ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 3, July-August 2023, Pp. 16-23
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಭಾರತೀಯ ಸುಸ್ಥಿರ ಗ್ರಾಮೀಣಾಭಿವೃದ್ಧಿಯಲ್ಲಿ ಕೇಂದ್ರ ಸರ್ಕಾರದ ಯೋಜನೆಗಳು

**ಪ್ರಸನ್ನಕುಮಾರ್ ಎಸ್ [1]& ಡಾ. ಎಸ್. ಶಿವರಾಜಪ್ಪ [2]**
[1]ಸಂಶೋಧನಾ ವಿದ್ಯಾರ್ಥಿ, ಗಾಂಧಿ ಅಧ್ಯಯನ ಕೇಂದ್ರ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
[2]ವಿಶ್ರಾಂತ ಪ್ರಾಧ್ಯಾಪಕರು, ಸಂಸ್ಕೃತ ಅಧ್ಯಯನ ವಿಭಾಗ, ಮಹಾರಾಜ ಕಾಲೇಜು, ಮೈಸೂರು.

***Abstract:***
*ಭಾರತವು ಬಹುಮುಖ್ಯವಾಗಿ ಕೃಷಿ ಪ್ರಧಾನ ದೇಶ. ಕೃಷಿಯು ಇಲ್ಲಿನ ಜೀವನೋಪಾಯದ ಪ್ರಮುಖ ಕಸುಬಾಗಿದೆ. ಭಾರತದ ಸಾಮಾಜಿಕ, ಆರ್ಥಿಕ ರಚನೆಯಲ್ಲಿ ಕೃಷಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತಿದ್ದು ಭಾರತೀಯ ಗ್ರಾಮೀಣ ಪ್ರದೇಶದ ಜನರು ಹೆಚ್ಚು ಕೃಷಿಯನ್ನು ಅವಲಂಬಿಸಿದ್ದಾರೆ. ಆದ್ದರಿಂದ ಗ್ರಾಮೀಣ ಪ್ರದೇಶವು ಅಭಿವೃದ್ಧಿಯ ಕೇಂದ್ರಬಿಂದುವಾಗಿದೆ. ಅಭಿವೃದ್ಧಿಯು ಸುಸ್ಥಿರ ಬೆಳವಣಿಗೆ, ವಿಕಸನ, ಪ್ರೇರಣೆ ಮತ್ತು ಪ್ರಗತಿಯ ಹಂತವನ್ನು ಸೂಚಿಸುತ್ತದೆ. 1947ರ ಭಾರತ ಸ್ವಾತಂತ್ರ್ಯೋತ್ತರದಲ್ಲಿ ಪ್ರತಿ ಸರ್ಕಾರಗಳು ಗ್ರಾಮೀಣಾಭಿವೃದ್ಧಿಗೆ ತಮ್ಮ ಬದ್ಧತೆಯನ್ನು ಪ್ರದರ್ಶಿಸಿವೆ. ಈ ಹಿನ್ನೆಲೆಯಲ್ಲಿ ಗ್ರಾಮೀಣ ಪ್ರದೇಶದ ಸುಸ್ಥಿರ ಅಭಿವೃದ್ಧಿಯಲ್ಲಿ ಕೇಂದ್ರ ಸರ್ಕಾರವು ವಹಿಸಿರುವ ವಿವಿಧ ಕಾರ್ಯಕ್ರಮಗಳು ಮತ್ತು ಯೋಜನೆಗಳ ಪಾತ್ರವೇನು ಎಂಬುದನ್ನು ಈ ಲೇಖನದಲ್ಲಿ ವಿವರಿಸಲಾಗಿದೆ.*

***Keywords:*** *ಗ್ರಾಮೀಣ ಪ್ರದೇಶ, ಸುಸ್ಥಿರ ಅಭಿವೃದ್ಧಿ, ಸರ್ಕಾರದ ಯೋಜನೆ, ಪಂಚಾಯತ್ ರಾಜ್.*

## ಪೀಠಿಕೆ

ಸುಸ್ಥಿರ ಗ್ರಾಮೀಣಾಭಿವೃದ್ಧಿಯು ಸಮುದಾಯದ ಭಾಗವಹಿಸುವಿಕೆ, ಆರೋಗ್ಯ ಮತ್ತು ಶಿಕ್ಷಣ, ಆಹಾರ ಭದ್ರತೆ, ಪರಿಸರ ಸಂರಕ್ಷಣೆ ಮತ್ತು ಸುಸ್ಥಿರ ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸುವ ಸಾಮರ್ಥ್ಯಗಳನ್ನು ಅಭಿವೃದ್ಧಿ ಪಡಿಸುವ ಮೂಲಕ ಗ್ರಾಮೀಣ ಬಡವರ ಜೀವನದ ಗುಣಮಟ್ಟವನ್ನು ಸುಧಾರಿಸುತ್ತದೆ. ಪರಿಸರವನ್ನು ಸುಸ್ಥಿರವಾಗಿಟ್ಟು ಸಮುದಾಯದ ಸದಸ್ಯರ ಬಡತನವನ್ನು ನಿರ್ಮೂಲನೆ ಮಾಡಲು ಹಾಗೂ ಅವರ ಸಂಪೂರ್ಣ ಸಾಮರ್ಥ್ಯವನ್ನು ಸ್ವತಃ ಸಾಧಿಸಲು ಅನುವು ಮಾಡಿಕೊಡುತ್ತದೆ. ಪರಿಸರವು ಎದುರಿಸುತ್ತಿರುವ ಸವಾಲುಗಳಿಗೆ ಪ್ರಾಯೋಗಿಕ ಪರಿಹಾರಗಳನ್ನು ಸುಸ್ಥಿರ ಅಭಿವೃದ್ಧಿಯ ಮೂಲಕ ಸಾಧಿಸಬಹುದು.

ಸುಸ್ಥಿರ ಗ್ರಾಮೀಣಾಭಿವೃದ್ಧಿಯಲ್ಲಿ ಸಮುದಾಯ ಭಾಗವಹಿಸುವಿಕೆ, ನೀರು ಮತ್ತು ನೈರ್ಮಲ್ಯ, ಬಡತನ ನಿರ್ಮೂಲನೆ ಮತ್ತು ರೋಗ ನಿಯಂತ್ರಣ, ಆಹಾರ ಭದ್ರತೆ, ಮಹಿಳೆಯರಿಗೆ ಶಿಕ್ಷಣ ಮತ್ತು ಸಮಾನ ಅವಕಾಶಗಳು, ತಾಯಂದಿರು ಮತ್ತು ಶಿಶುಗಳನ್ನು ಬದುಕುಳಿಸುವ ನಿರೀಕ್ಷೆ, ನೈಸರ್ಗಿಕ ಸಂಪನ್ಮೂಲಗಳ ರಕ್ಷಣೆ ಮತ್ತು ಪರಿಸರ ಸಂರಕ್ಷಣೆ, ಆರ್ಥಿಕ ಬೆಳವಣಿಗೆ ಮತ್ತು ಮೂಲಸೌಕರ್ಯ ಅಭಿವೃದ್ಧಿ, ವಿಜ್ಞಾನ ಮತ್ತು ತಂತ್ರಜ್ಞಾನ, ಸಾರ್ವಜನಿಕ ನೀತಿ ಮತ್ತು ಆಡಳಿತ ಪ್ರಮುಖವಾದವುಗಳಾಗಿವೆ.

ಸುಸ್ಥಿರ ಗ್ರಾಮೀಣಾಭಿವೃದ್ಧಿಯನ್ನು ಸಾಧಿಸಲು ಮುಖ್ಯವಾದ ನಾಲ್ಕು ಹಂತಗಳೆಂದರೆ ನಿರೂಪಣಾತ್ಮಕ ಅಥವಾ ಪರಿಶೋಧನಾತ್ಮಕ ಹಂತ, ರಾಜಕೀಯ

***Please cite this article as:*** ಪ್ರಸನ್ನಕುಮಾರ್ ಎಸ್ & ಎಸ್ ಶಿವರಾಜಪ್ಪ. (2023). ಭಾರತೀಯ ಸುಸ್ಥಿರ ಗ್ರಾಮೀಣಾಭಿವೃದ್ಧಿಯಲ್ಲಿ ಕೇಂದ್ರ ಸರ್ಕಾರದ ಯೋಜನೆಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್,* 2(3), 16–23.

ಚರ್ಚೆಯ ಹಂತ, ಯೋಜನಾ ಹಂತ, ಅನುಷ್ಠಾನದ ಹಂತ.

ಗ್ರಾಮೀಣ ಪ್ರದೇಶಗಳಲ್ಲಿ ಮೌಲ್ಯಯುತ ಉತ್ಪಾದನೆ ಮತ್ತು ಉತ್ಪಾದಕತೆಯನ್ನು ಸಾಧಿಸಲು ಆ ಪ್ರದೇಶದ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯಲ್ಲಿ ಪ್ರಾದೇಶಿಕ ಸಮತೋಲನ ಮುಖ್ಯಪಾತ್ರ ನಿರ್ವಹಿಸುತ್ತದೆ. ಆದ್ದರಿಂದ ಪರಿಸರ ವ್ಯವಸ್ಥೆಯಲ್ಲಿ ಸುಧಾರಣೆ ತರುವುದರ ಮೂಲಕ ಅಭಿವೃದ್ಧಿ ಮತ್ತು ಅದರ ಪ್ರಕ್ರಿಯೆಯಲ್ಲಿ ಸಮುದಾಯ ದ ಭಾಗವಹಿಸುವಿಕೆಯನ್ನು ಉತ್ತೇಜಿಸುವುದು ಸುಸ್ಥಿರ ಗ್ರಾಮೀಣಾಭಿವೃದ್ಧಿಯ ಪ್ರಮುಖ ಗುರಿಯಾಗಿದೆ. ಪ್ರಸ್ತುತ ಗ್ರಾಮೀಣ ಪ್ರದೇಶದಲ್ಲಿ ಕೃಷಿ, ತಂತ್ರಜ್ಞಾನ, ಶಿಕ್ಷಣ ಮತ್ತು ಮೂಲ ಸೌಕರ್ಯಗಳನ್ನು ಸುಧಾರಿಸಲು ಭಾರತ ಸರ್ಕಾರವು ಕೈಗೊಂಡಿರುವ ವಿವಿಧ ಸುಸ್ಥಿರ ಕಾರ್ಯಕ್ರಮಗಳನ್ನು ತಿಳಿಯುವು ದಾಗಿದೆ. ಕೇಂದ್ರ ಸರ್ಕಾರವು ಗ್ರಾಮೀಣ ಪ್ರದೇಶದ ಬಡವರಿಗೆ, ಸಣ್ಣ ಮತ್ತು ಅತಿಸಣ್ಣ ರೈತರಿಗೆ, ಭೂರಹಿತ ಕೂಲಿ ಕಾರ್ಮಿಕರಿಗೆ ಹಾಗೂ ಗ್ರಾಮೀಣ ಕುಶಲಕರ್ಮಿಗಳಿಗೆ ಐಆರ್‌ಡಿಪಿ, ನರೇಗಾ, ಟಿಆರ್‌ವೈಎಸ್‌ಎಂ, ಅಂತ್ಯೋದಯ ಮುಂತಾದ ಯೋಜನೆಗಳನ್ನು ಅನುಷ್ಠಾನಗೊಳಿಸಿದೆ.

**ಅಧ್ಯಯನದ ಉದ್ದೇಶಗಳು**

ಈ ಹಿಂದೆ ಸರ್ಕಾರವು ಪ್ರಾರಂಭಿಸಿದ ವಿವಿಧ ಸುಸ್ಥಿರ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳನ್ನು ತಿಳಿಸುವುದು. ಗ್ರಾಮೀಣ ಅಭಿವೃದ್ಧಿಯ ಅಡಿಯಲ್ಲಿ ಕೃಷಿ, ತಂತ್ರಜ್ಞಾನ, ಶಿಕ್ಷಣ ಮತ್ತು ಮೂಲ ಸೌಕರ್ಯಗಳಂತಹ ಕ್ಷೇತ್ರಗಳನ್ನು ಸುಧಾರಿಸಲು ಸರ್ಕಾರವು ತೆಗೆದುಕೊಂಡ ಕ್ರಮಗಳನ್ನು ತಿಳಿಯು ವುದು ಈ ಅಧ್ಯಯನದ ಪ್ರಮುಖ ಉದ್ದೇಶಗಳಾಗಿವೆ.

**ಸ್ವಾತಂತ್ರ್ಯ ಪೂರ್ವ ಗ್ರಾಮೀಣ ಅಭಿವೃದ್ಧಿಯ ಪ್ರಯೋಗಗಳು**

1947ರಲ್ಲಿ ಸ್ವಾತಂತ್ರ್ಯದ ಮೊದಲು ವಿವಿಧ ವ್ಯಕ್ತಿಗಳು ಮತ್ತು ಸಂಸ್ಥೆಗಳು ಕಾಲಕಾಲಕ್ಕೆ ಗ್ರಾಮೀಣ ಅಭಿವೃದ್ಧಿಯಲ್ಲಿ ಪ್ರಯೋಗಗಳನ್ನು ಮಾಡುತ್ತಿದ್ದರು. 1903ರಲ್ಲಿ ಸರ್ ಡೇನಿಯಲ್ ಹ್ಯಾಮಿಲ್ಟನ್ ಅವರಿಂದ ಸುಂದರಬನ್(ಬಂಗಾಳ) ಮಾದರಿ ಗ್ರಾಮ, 1920 ರವೀಂದ್ರನಾಥ ಠ್ಯಾಗೋರ್ ಅವರ ಶ್ರೀನಿಕೇತನ ಪ್ರಯೋಗ, 1921ರಲ್ಲಿ ಬ್ರೈನ್ ರವರ ಗುರುಗಾಂವ್ ಪ್ರಯೋಗ, ಕೃಷ್ಣಮಾಚಾರಿ ಅವರ ಬರೋಡಾ ಪುನರ್ ನಿರ್ಮಾಣ ಚಳುವಳಿ(1930), ಗಾಂಧೀಜಿಯವರ ಚಂಪಾರಣ್(1931) ಮತ್ತು ಸೇವಾಗ್ರಾಮ(1936) ಪ್ರಯೋಗ ಮತ್ತು 1946ರ ಮದ್ರಾಸ್ ರಾಜ್ಯದಲ್ಲಿನ ಫಿರ್ಕಾ ಅಭಿವೃದ್ಧಿ ಯೋಜನೆಯು ಭವಿಷ್ಯದ ಸುಸ್ಥಿರ ಗ್ರಾಮೀಣಾಅಭಿವೃದ್ಧಿ ಕಾರ್ಯಕ್ರಮಗಳ ಮೇಲೆ ಗಣನೀಯ ಪ್ರಭಾವ ಬೀರುವ ಕೆಲವು ಪ್ರಮುಖ ಉಪಕ್ರಮಗಳಾಗಿವೆ. ಈ ಆರಂಭಿಕ ಯೋಜನೆಗಳಲ್ಲಿ ಲಭ್ಯವಿರುವ ಮಾಹಿತಿಯು ಈ ಪ್ರಯೋಗಗಳಲ್ಲಿ ತೊಡಗಿಸಿಕೊಂಡಿರುವ ಸಾಮಾಜಿಕ ಕಾರ್ಯಕರ್ತರ ನೆನೆಪುಗಳನ್ನು ಆಧರಿಸಿದೆ ಹಾಗೂ ಅತ್ಯಲ್ಪವಾಗಿದೆ.

**ಸ್ವಾತಂತ್ರ್ಯೋತ್ತರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ ಇತ್ವಾ ಯೋಜನೆ (1948–52)**

ಗ್ರಾಮೀಣ ಯೋಜನೆ ಮತ್ತು ಅಭಿವೃದ್ಧಿಗಾಗಿ 1947–48ರ ಆಲ್ಬರ್ಟ್ ಮೇಯರ್ ರವರ ಇತ್ವಾ ಯೋಜನೆಯು ಪ್ರಮುಖ ಪಾತ್ರವನ್ನು ವಹಿಸಿದೆ ಮತ್ತು ಭಾರತದಲ್ಲಿನ ಸಮುದಾಯ ಅಭಿವೃದ್ಧಿ ಯೋಜನೆಗಳಲ್ಲಿ ಮುಂಚೂಣಿಯಲ್ಲಿದೆ. ಆರಂಭಿಕ ಹಂತದ ಕೆಲವು ದೋಷಗಳ ಹೊರತಾಗಿ, ಒಂದೂವರೆ ವರ್ಷದ ಅವಧಿಯ ಪ್ರಯೋಗದೊಂದಿಗೆ ಆಡಳಿತಾತ್ಮಕ ಮಾದರಿಯನ್ನು ವಿಕಸನಗೊಳಿಸಲಾಗಿ, ಮೊದಲ ಬಾರಿಗೆ ಗ್ರಾಮ ಮಟ್ಟಕ್ಕೆ ವಿಸ್ತರಣಾ ಚಟುವಟಿಕೆಗಳನ್ನು ವಿಸ್ತರಿಸಲು ಸುಗಮಗೊಳಿಸಿತು. ವಿವಿಧ ಅಭಿವೃದ್ಧಿ ಇಲಾಖೆಗಳ ಚಟುವಟಿಕೆಗಳನ್ನು ಒಂದು ಸಾಮಾನ್ಯ ಏಜೆನ್ಸಿಯ ಮೂಲಕ ಆರಂಭಿಸಲಾಯಿತು ಹಾಗೂ ವಿವಿಧೋದ್ದೇಶ ಗ್ರಾಮ ಮಟ್ಟದ ಕೆಲಸಗಾರನ ಪರಿಕಲ್ಪನೆಯು ಇಲ್ಲಿ ಹೊರಹೊಮ್ಮಿತು.

**ಗ್ರಾಮೀಣಾಭಿವೃದ್ಧಿ ಚಟುವಟಿಕೆಯ ನಾಲ್ಕು ಮುಖ್ಯ ಮಾರ್ಗಗಳು**

ಗ್ರಾಮೀಣಾಭಿವೃದ್ಧಿಗೆ ಮುಖ್ಯವೆಂದು ಪರಿಗಣಿಸಲಾದ ಚಟುವಟಿಕೆಗಳನ್ನು ಈ ಕೆಳಗಿನಂತೆ ವಿಂಗಡಿಸಬಹುದು ಅವುಗಳೆಂದರೆ ಕೃಷಿ ಮತ್ತು ಸಂಬಂಧಿತ ವಿಷಯಗಳು, ಶಿಕ್ಷಣ, ತಂತ್ರಜ್ಞಾನ, ಮೂಲಸೌಕರ್ಯಗಳು.

**ಕೃಷಿ ಮತ್ತು ಸಂಬಂಧಿತ ವಿಷಯಗಳು**

ಈ ಕಾರ್ಯಕ್ರಮಗಳು ಲಭ್ಯವಿರುವ ಫಲವತ್ತಾದ ಮತ್ತು ಬಂಜರು ಭೂಮಿಯನ್ನು ಮರುಸ್ಥಾಪಿಸುವುದು. ವಾಣಿಜ್ಯ ರಸಗೊಬ್ಬರಗಳು ಮತ್ತು ಸುಧಾರಿತ ಬೀಜಗಳನ್ನು ಒದಗಿಸುವುದು ಹಾಗೂ ಮಣ್ಣಿನ ಸವೆತವನ್ನು ತಡೆಗಟ್ಟುವುದು, ನೈಸರ್ಗಿಕ ಮತ್ತು ಕಾಂಪೋಸ್ಟ್ ಗೊಬ್ಬರಗಳ ಬಳಕೆಯನ್ನು ಪ್ರೋತ್ಸಾಹಿಸುವುದು, ಜಾನುವಾರುಗಳ ಸಾಕಾಣಿಕೆಯಲ್ಲಿ ಸುಧಾರಣೆ, ಅಂತರ್ಜಲ ಮರುಪೂರಣ, ಮಳೆನೀರು ಸಂಗ್ರಹಣೆ, ಕೃಷಿ ಮುಂತಾದ ವಿಚಾರಗಳನ್ನೊಳಗೊಂಡಿದೆ.

**ನೀರಾವರಿ ಮತ್ತು ನೀರು ಸರಬರಾಜು**

ಈ ಕಾರ್ಯಕ್ರಮವು ಸಣ್ಣ ನೀರಾವರಿ ಮೂಲಕ ಕೃಷಿಗೆ ನೀರನ್ನು ಒದಗಿಸುವುದನ್ನು ಒಳಗೊಂಡಿರುತ್ತದೆ. ಉದಾ: ನೀರಿನ ತೊಟ್ಟಿಗಳು, ಕಾಲುವೆಗಳು, ಮೇಲ್ಮೈ ಬಾವಿಗಳು, ಕೊಳವೆ ಬಾವಿಗಳು ಇತ್ಯಾದಿ.

**ಶಿಕ್ಷಣ**

ಸಮುದಾಯದ ಸಾಮಾಜಿಕ ಶಿಕ್ಷಣ, ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣದ ವಿಸ್ತರಣೆ ಮತ್ತು ಸುಧಾರಣೆಗಾಗಿ ಒದಗಿಸುವ ಯೋಜನೆಗಳು ಶೈಕ್ಷಣಿಕ ಕಾರ್ಯಕ್ರಮದ ಎಲ್ಲಾ ಹಂತಗಳಲ್ಲಿ ವೃತ್ತಿಪರ ಮತ್ತು ತಾಂತ್ರಿಕ ತರಬೇತಿಗೆ ಒತ್ತು ನೀಡುವುದು.

**ಪೂರಕ ಉದ್ಯೋಗ ಮತ್ತು ತರಬೇತಿ**

ಗ್ರಾಮ ಸಮುದಾಯದಲ್ಲಿರುವ ನಿರುದ್ಯೋಗಿಗಳು ಮತ್ತು ಅರೆ ನಿರುದ್ಯೋಗಿಗಳಿಗೆ ಗುಡಿ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳ ಅಭಿವೃದ್ಧಿಯಿಂದ ಸಾಧ್ಯವಾದಷ್ಟು ಮಟ್ಟಿಗೆ ಲಾಭದಾಯಕ ಉದ್ಯೋಗಗಳನ್ನು ಒದಗಿಸಲಾಗುತ್ತದೆ. ರೈತರು, ಗ್ರಾಮ ಮಟ್ಟದ ಕಾರ್ಯಕರ್ತರು, ಯೋಜನಾ ಮೇಲ್ವಿಚಾರಕರು ಮತ್ತು ಇತರೆ ಸಿಬ್ಬಂದಿಗಳ ಕೌಶಲ್ಯ ಉನ್ನತೀಕರಣಕ್ಕಾಗಿ ತರಬೇತಿಯನ್ನು ಕೈಗೊಳ್ಳುವುದು.

**ತಂತ್ರಜ್ಞಾನ**

ಗ್ರಾಮೀಣ ಪ್ರದೇಶಗಳಿಗೆ ತಲುಪುವ ಹೆಚ್ಚಿನ ತಂತ್ರಜ್ಞಾನ ಸರಳವಾಗಿರಬೇಕು ಹಾಗೂ ತಂತ್ರಜ್ಞಾನದ ಸಾಧನಗಳನ್ನು ಗ್ರಾಮೀಣ ಪ್ರದೇಶದಲ್ಲಿಯೇ ತಯಾರಿಸಲು ಸಾಧ್ಯವಾಗಬೇಕು ಎಂಬ ಅಭಿವೃದ್ಧಿಯ ಉದ್ದೇಶದಿಂದ ಕೈಗೊಳ್ಳಲಾಗಿದೆ. ವಿಜ್ಞಾನ ಮತ್ತು ತಂತ್ರಜ್ಞಾನ ಆಧಾರಿತ ಕ್ಷೇತ್ರ ಸಂಘಸಂಸ್ಥೆಗಳಿಗೆ ಪ್ರಮುಖ ಬೆಂಬಲ, ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆ, ವಸತಿ, ನವೀಕರಿಸಬಹುದಾದ ಶಕ್ತಿ, ಕೃಷಿ ಮತ್ತು ಕೃಷಿಯೇತರ ವಲಯಗಳಲ್ಲಿ ಮಿತವೆಚ್ಚದಾಯಕ ತಾಂತ್ರಿಕ ಪರಿಹಾರಗಳನ್ನು ಅಭಿವೃದ್ಧಿ ಪಡಿಸುವಲ್ಲಿ ತೊಡಗಿಸಿಕೊಳ್ಳುವುದು.

**ಮೂಲಸೌಕರ್ಯ**

ಗ್ರಾಮೀಣ ಮೂಲಸೌಕರ್ಯಗಳನ್ನು ಮೇಲ್ದರ್ಜೆಗೇರಿಸಲು ಒಂದು ಸಾವಿರ ಜನಸಂಖ್ಯೆಗಿಂತ ಹೆಚ್ಚಿನ ಹಳ್ಳಿಗಳಿಗೆ ಮತ್ತು ಗುಡ್ಡಗಾಡು ಮತ್ತು ಬುಡಕಟ್ಟು ಪ್ರದೇಶಗಳಲ್ಲಿ ಐದುನೂರು ಜನಸಂಖ್ಯೆಗಿಂತ ಹೆಚ್ಚಿನ ಎಲ್ಲಾ ವಸತಿಗಳಿಗೆ ರಸ್ತೆ ಸಂಪರ್ಕವನ್ನು ಒದಗಿಸಲು ವಸತಿ, ವಿದ್ಯುಚ್ಛಕ್ತಿ, ಪ್ರಾಥಮಿಕ ಆರೋಗ್ಯಕೇಂದ್ರ, ಒಳಚರಂಡಿ ವ್ಯವಸ್ಥೆ, ಇವೇ ಮುಂತಾದ ವಿಷಯಗಳಿಗೆ ಸರ್ಕಾರವು ಪ್ರಸ್ತಾವನೆಯನ್ನು ರೂಪಿಸಿದೆ.

**ಕೇಂದ್ರ ಸರ್ಕಾರ ಆರಂಭಿಸಿದ ಬಡತನಾ ನಿರ್ಮೂಲನಾ ಕಾರ್ಯಕ್ರಮಗಳು**

ಕೇಂದ್ರ ಸರ್ಕಾರವು ಸಣ್ಣ ಮತ್ತು ಅತಿಸಣ್ಣ ರೈತರು, ಭೂರಹಿತ ಕಾರ್ಮಿಕರು ಮತ್ತು ಗ್ರಾಮೀಣ ಕುಶಲಕರ್ಮಿಗಳನ್ನು ಒಳಗೊಂಡ ಗ್ರಾಮೀಣ ಬಡವರಿಗಾಗಿ ಹಲವಾರು ಬಡತನ ನಿರ್ಮೂಲನೆ ಕಾರ್ಯಕ್ರಮಗಳನ್ನು ಪ್ರಾರಂಭಿಸಿದೆ. ಅವು ಈ ಕೆಳಗಿನಂತಿವೆ.

**ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ (IRDP)**

ಈ ಕಾರ್ಯಕ್ರಮವು ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ ಬಡವರ ಜೀವನಮಟ್ಟವನ್ನು ಸುಧಾರಿಸುವುದು ಮತ್ತು ಗ್ರಾಮೀಣ ಅಭಿವೃದ್ಧಿಯ ಪ್ರಕ್ರಿಯೆಯನ್ನು ಸ್ವಾವಲಂಬಿಯಾಗಿಸುವ ಕಾರ್ಯವನ್ನು ಸೂಚಿಸುತ್ತದೆ. 1978–79ರಲ್ಲಿ ಪ್ರಾರಂಭವಾದ ಈ ಯೋಜನೆಯನ್ನು 1980–81ರಲ್ಲಿ ದೇಶದಾದ್ಯಂತ ವಿಸ್ತರಿಸಲಾಯಿತು.

**ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮ (NREP)**

ಈ ಕಾರ್ಯಕ್ರಮವನ್ನು ಅಕ್ಟೋಬರ್ 1980ರಲ್ಲಿ ಕೇಂದ್ರ ಮತ್ತು ರಾಜ್ಯಗಳ ನಡುವೆ ಶೇಕಡ 50:50ರ ಹಂಚಿಕೆ ಆಧಾರದ ಮೇಲೆ ಕೇಂದ್ರ ಪ್ರಾಯೋಜಿತ ಯೋಜನೆಯಾಗಿ ಪ್ರಾರಂಭಿಸಲಾಯಿತು. ಹೆಚ್ಚುವರಿ ಲಾಭದಾಯಕ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು, ದೀರ್ಘಕಾಲ ಉಳಿಯುವ ಸಮುದಾಯ ಸ್ವತ್ತುಗಳನ್ನು ಸೃಜಿಸುವುದು ಮತ್ತು ಗ್ರಾಮೀಣ ಪ್ರದೇಶದಲ್ಲಿ ಒಟ್ಟಾರೆ ಜೀವನದ ಗುಣಮಟ್ಟವನ್ನು ಸುಧಾರಿಸುವ ಈ ಮೂರು ಉದ್ದೇಶಗಳನ್ನು ಯೋಜನೆಯು ಒಳಗೊಂಡಿದೆ.

**ಗ್ರಾಮೀಣ ಯುವಜನತೆಗೆ ಸ್ವಯಂ ಉದ್ಯೋಗಕ್ಕಾಗಿ ತರಬೇತಿ ಯೋಜನೆ (TRYSEM)**

ಗ್ರಾಮೀಣ ಯುವಕರಿಗೆ ಕೃಷಿ, ಕೈಗಾರಿಕೆ, ಸೇವೆಗಳು ಮತ್ತು ವ್ಯಾಪಾರ ಚಟುವಟಿಕೆಗಳ ಕ್ಷೇತ್ರಗಳಲ್ಲಿ ಸ್ವಯಂ ಉದ್ಯೋಗಕ್ಕೆ ಅನುವುಮಾಡಿಕೊಡಲು ಹಾಗೂ ತಾಂತ್ರಿಕ ಕೌಶಲ್ಯಗಳನ್ನು ಒದಗಿಸುವ ಪ್ರಾಥಮಿಕ ಉದ್ದೇಶದಿಂದ ಗ್ರಾಮೀಣ ಯುವಕರಿಗೆ ಸ್ವಯಂ ಉದ್ಯೋಗಕ್ಕಾಗಿ ತರಬೇತಿ ನೀಡುವ ಯೋಜನೆಯನ್ನು ಆಗಸ್ಟ್ 1979ರಲ್ಲಿ ಪ್ರಾರಂಭಿಸಲಾಯಿತು.

**ಗ್ರಾಮೀಣ ಭೂರಹಿತರಿಗೆ ಉದ್ಯೋಗ ಖಾತರಿ ಕಾರ್ಯಕ್ರಮ (RLEGP):** ಗ್ರಾಮೀಣ ಪ್ರದೇಶಗಳಲ್ಲಿ ವಿಶೇಷವಾಗಿ ಗ್ರಾಮೀಣ ಭೂರಹಿತ ಕಾರ್ಮಿಕರಿಗೆ ಹೆಚ್ಚುವರಿ ಉದ್ಯೋಗವನ್ನು ಸೃಷ್ಟಿಸಲು ಗ್ರಾಮೀಣ ಭೂರಹಿತ ಉದ್ಯೋಗ ಖಾತರಿ ಕಾರ್ಯಕ್ರಮವನ್ನು ಆಗಸ್ಟ್ 1983ರಂದು ಪ್ರಾರಂಭಿಸಲಾಯಿತು. ಈ ಯೋಜನೆಯಡಿಯಲ್ಲಿ ಪ್ರತಿ ಭೂರಹಿತ ಕುಟುಂಬದ ಕನಿಷ್ಠ ಒಬ್ಬ ಸದಸ್ಯನಿಗೆ ವರ್ಷದಲ್ಲಿ 100 ದಿನಗಳವರೆಗೆ ಉದ್ಯೋಗವನ್ನು ನೀಡಲಾಗುತ್ತದೆ.

**ಜವಾಹರ್ ರೋಜಗಾರ್ ಯೋಜನೆ (JRY)**

ಈ ಯೋಜನೆಯನ್ನು ಏಪ್ರಿಲ್ 1984ರಲ್ಲಿ ಪ್ರಾರಂಭಿಸಲಾಯಿತು. ಇದು ಪೂರ್ವಭಾವಿಯಾಗಿ ವೇತನ ಉದ್ಯೋಗ ಕಾರ್ಯಕ್ರಮವಾಗಿದೆ. ಈ ಯೋಜನೆಯಡಿಯಲ್ಲಿ ಪ್ರತಿ ಕುಟುಂಬದ ಕನಿಷ್ಠ ಒಬ್ಬ ಸದಸ್ಯನಿಗೆ ಅವನ ನಿವಾಸದ ಸಮೀಪವಿರುವ ಕೆಲಸದ ಸ್ಥಳದಲ್ಲಿ ವರ್ಷದಲ್ಲಿ 80 ರಿಂದ 100 ದಿನಗಳವರೆಗೆ ಉದ್ಯೋಗವನ್ನು ಒದಗಿಸುವ ಮತ್ತು ಮಹಿಳೆಯರಿಗೂ ಸಮಾನ ಕೂಲಿ ನೀಡುವ ಕಾರ್ಯಕ್ರಮವಾಗಿದೆ.

**ಜವಹಾರ್ ಗ್ರಾಮ ಸಮೃದ್ಧಿ ಯೋಜನೆ (JGSY)**

ಈ ಯೋಜನೆಯು ಜವಾಹರ್ ರೋಜಗಾರ್ ಯೋಜನೆಯ ಪುನರ್ ರಚಿತ ರೂಪವಾಗಿದೆ. ಈ ಯೋಜನೆಯು 1999ರಿಂದ ಸಕ್ರಿಯವಾಗಿದೆ. ಇದು ಹಳ್ಳಿಯ ಮೂಲಸೌಕರ್ಯಗಳನ್ನು ರಚಿಸಲು ಗ್ರಾಮ ಮಟ್ಟದಲ್ಲಿ ಮಾತ್ರ ಜಾರಿಗೊಳಿಸಲಾಗಿದೆ ಮತ್ತು ಬಡತನವನ್ನು ನಿವಾರಿಸಲು ಉದ್ಯೋಗಾವ ಕಾಶಗಳನ್ನು ಸೃಷ್ಟಿಸುತ್ತದೆ.

**ಅಂತ್ಯೋದಯ ಕಾರ್ಯಕ್ರಮ**

ಅಂತ್ಯೋದಯವೆಂದರೆ ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದ ಕಟ್ಟಕಡೆಯ ವ್ಯಕ್ತಿಯ ಕಲ್ಯಾಣ. ನಿಜಾರ್ಥದಲ್ಲಿ ಹೇಳುವುದಾದರೆ, ಈ ಕಾರ್ಯಕ್ರಮವು ಗ್ರಾಮಾಂತರ ದಲ್ಲಿರುವ ಕಡುಬಡವರನ್ನು ಅರ್ಥಿಕವಾಗಿ ಸುಧಾರಿಸಲು ಮತ್ತು ಅವರನ್ನು ಸಶಕ್ತರನ್ನಾಗಿಸುವ ಉದ್ದೇಶವನ್ನೊಳಗೊಂಡಿದೆ. ಈ ಕಾರ್ಯಕ್ರಮದ ಕಾರ್ಯಾಚರಣೆಗೆ ಸಂಬಂಧಿಸಿದಂತೆ ಪ್ರತಿವರ್ಷ ಗ್ರಾಮದ ಐದು ಬಡಕುಟುಂಬಗಳನ್ನು ಗುರುತಿಸಿ ಆಯ್ಕೆಮಾಡಲಾ

ಗುತ್ತದೆ ಹಾಗೂ ಸದರಿ ಕುಟುಂಬಗಳ ಆರ್ಥಿಕ ಸುಧಾರಣೆಗೆ ಶ್ರಮಿಸಲಾಗುತ್ತದೆ.

**ಬರಪೀಡಿತ ಪ್ರದೇಶ ಕಾರ್ಯಕ್ರಮ (DPAP)**

ಬರಪೀಡಿತ ಪ್ರದೇಶಗಳಿಗಾಗಿ ನಾಲ್ಕನೇ ಪಂಚವಾರ್ಷಿಕ ಯೋಜನೆಯ ಮಧ್ಯಾವಧಿಯ ಮೌಲ್ಯಮಾಪನ ಸಮಯದಲ್ಲಿ ಬರಪೀಡಿತ ಪ್ರದೇಶ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ಬರಗಾಲದ ಪ್ರಭಾವದ ತೀವ್ರತೆಯನ್ನು ಕಡಿಮೆ ಮಾಡುವುದು, ಗ್ರಾಮೀಣ ಸಮುದಾಯದ ದುರ್ಬಲ ವರ್ಗಗಳ ಆದಾಯವನ್ನು ಸ್ಥಿರಗೊಳಿಸುವುದು ಮತ್ತು ಪರಿಸರ ಸಮತೋಲನವನ್ನು ಮರುಸ್ಥಾಪಿಸುವುದು ಈ ಕಾರ್ಯಕ್ರಮದ ಮೂಲೋದ್ದೇಶಗಳಾಗಿವೆ.

**ಕೂಲಿಗಾಗಿ ಕಾಳು ಯೋಜನೆ (FFWP)**

ಏಪ್ರಿಲ್ 1977ರಲ್ಲಿ ಈ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ಇದು ಬಡತನ ರೇಖೆಗಿಂತ ಕೆಳಗಿರುವ ಗ್ರಾಮೀಣರಿಗೆ ಸಹಾಯಧನ(ಸಬ್ಸಿಡಿ) ಬೆಲೆಯಲ್ಲಿ ಆಹಾರಧಾನ್ಯಗಳನ್ನು ನೀಡುವ ಗುರಿಯನ್ನು ಹೊಂದಿದೆ.

**ಗ್ರಾಮೀಣ ಪ್ರದೇಶಗಳಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಯೋಜನೆ (DWCRA)**

ಈ ಯೋಜನೆಯನ್ನು 1982–83ರಲ್ಲಿ 50 ಜಿಲ್ಲೆಗಳಲ್ಲಿ ಗ್ರಾಮೀಣಪರಿಚಯಿಸಲಾಯಿತು. ಈ ಯೋಜನೆಯ ಪ್ರಮುಖ ಉದ್ದೇಶ ಆಯ್ಕೆಯಾದ ಪ್ರತಿ ಜಿಲ್ಲೆಯಲ್ಲಿ ಸ್ವಾವಲಂಬಿ ಆಧಾರದ ಮೇಲೆ ಆದಾಯ ಉತ್ಪಾದಿಸುವ ಚಟುವಟಿಕೆಗಳನ್ನು ರಚಿಸುವ ಮೂಲಕ ಗ್ರಾಮೀಣ ಮಹಿಳೆಯರ ಮತ್ತು ಮಕ್ಕಳ ಸಾಮಾಜಿಕ–ಆರ್ಥಿಕ ಸ್ಥಿತಿಯನ್ನು ಸುಧಾರಿಸುವುದು.

**ಉದ್ಯೋಗ ಖಾತ್ರಿ ಯೋಜನೆ (EAS)**

ಈ ಯೋಜನೆಯನ್ನು 1983ರಲ್ಲಿ ಪ್ರಾರಂಭಿ ಸಲಾಯಿತು ಮತ್ತು 1996ರಲ್ಲಿ ದೇಶಾದ್ಯಂತ ಹಂತಹಂತವಾಗಿ ವಿಸ್ತರಿಸಲಾಯಿತು. ಈ ಯೋಜನೆಯು ಒಂದು ವರ್ಷದಲ್ಲಿ ಗ್ರಾಮೀಣ ಕುಟುಂಬದ ಇಬ್ಬರಿಗೆ 100 ದಿನಗಳ ಉದ್ಯೋಗ ಒದಗಿಸುವ ಗುರಿಯನ್ನು ಹೊಂದಿದೆ.

**ಸ್ವರ್ಣ ಜಯಂತಿ ಗ್ರಾಮ್ ಸ್ವರಾಜ್‌ಗಾರ್ ಯೋಜನೆ (SGSY)**: ಈ ಯೋಜನೆಯು ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ (IRDP), ಗ್ರಾಮೀಣ ಯುವಜನತೆಗೆ ಸ್ವಯಂ ಉದ್ಯೋಗಕ್ಕಾಗಿ ತರಬೇತಿ ಯೋಜನೆ (TRYSEM) ಇತ್ಯಾದಿ ಹಿಂದಿನ ಕಾರ್ಯಕ್ರಮಗಳನ್ನು ಬದಲಿಸಿ ಏಪ್ರಿಲ್ 1999ರಲ್ಲಿ ಪ್ರಾರಂಭಿಸಲಾಯಿತು. ಈ ಕಾರ್ಯಕ್ರಮವು ವಿದ್ಯಾವಂತರು ಮತ್ತು ಯುವಜನತೆಯು ಬ್ಯಾಂಕ್ ಸಾಲ ಮತ್ತು ಸಬ್ಸಿಡಿ ಮೂಲಕ ಹೆಚ್ಚಿನ ಸಂಖ್ಯೆಯ ಕೈಗಾರಿಕೆಗಳನ್ನು ಸ್ಥಾಪಿಸುವಲ್ಲಿ ಪ್ರಮುಖವಾಗಿದೆ. ಮೂರು ವರ್ಷಗಳಲ್ಲಿ ಬಡಕುಟುಂಬಗಳು ಬಡತನರೇಖೆಗಿಂತ ಮೇಲಕ್ಕೆ ಬರುವಂತೆ ಮಾಡುವಲ್ಲಿ ಇದು ಪ್ರಮುಖ ಪಾತ್ರ ವಹಿಸುತ್ತದೆ.

**ಪ್ರಧಾನಮಂತ್ರಿ ರೋಜ್‌ಗಾರ್ ಯೋಜನೆ (PMRY)**

ಈ ಯೋಜನೆಯು ಯುವಜನತೆಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಪ್ರೋತ್ಸಾಹಿಸುವ ಕಾರ್ಯ ಕ್ರಮವಾಗಿದೆ. ದೇಶದ ವಿದ್ಯಾವಂತ ನಿರುದ್ಯೋಗಿಗಳಿಗೆ ಉದ್ಯೋಗಾವಕಾಶವನ್ನು ಒದಗಿಸಲು ಈ ಕಾರ್ಯಕ್ರಮವನ್ನು ಅಕ್ಟೋಬರ್ 2 1993 ರಿಂದ ಜಾರಿಗೊಳಿಸಲಾಗಿದೆ.

**ಜೈ ಪ್ರಕಾಶ್ ರೋಜ್‌ಗಾರ್ ಖಾತರಿ ಯೋಜನೆ (JPRGY)**

ದೇಶದ ಅತ್ಯಂತ ಸಂಕಷ್ಟದ ಜಿಲ್ಲೆಗಳಲ್ಲಿ ನಿರುದ್ಯೋಗಿಗಳಿಗೆ ಉದ್ಯೋಗಖಾತ್ರಿ ಒದಗಿಸಲು ಜೈ ಪ್ರಕಾಶ್ ರೋಜ್‌ಗಾರ್ ಖಾತರಿ ಯೋಜನೆಯನ್ನು 2002ರಲ್ಲಿ ಪ್ರಾರಂಭಿಸಲಾಯಿತು.

**ರಾಷ್ಟ್ರೀಯ ಸಾಮಾಜಿಕ ನೆರವು ಕಾರ್ಯಕ್ರಮ (NSAP)**

ಬಡಕುಟುಂಬಗಳಿಗೆ ಸಾಮಾಜಿಕ ನೆರವು ನೀಡಲು ಕೇಂದ್ರ ಸರ್ಕಾರವು ರಾಷ್ಟ್ರೀಯ ಸಾಮಾಜಿಕ ನೆರವು ಕಾರ್ಯಕ್ರಮವನ್ನು ರೂಪಿಸಿದೆ. ಕಾರ್ಯಕ್ರಮವು 15 ಆಗಸ್ಟ್ 1995ರಿಂದ ಜಾರಿಗೆ ಬಂದಿತು ಮತ್ತು ಇದು ರಾಷ್ಟ್ರೀಯ ವೃದ್ಧಾಪ್ಯ ಪಿಂಚಣಿ ಯೋಜನೆ,

ರಾಷ್ಟ್ರೀಯ ಕುಟುಂಬ ಯೋಜನೆ, ರಾಷ್ಟ್ರೀಯ ಮಾತೃತ್ವ ಯೋಜನೆ ಎಂಬ ಮೂರು ಯೋಜನೆಗಳನ್ನೊಳಗೊಂಡಿದೆ.

**ಗ್ರಾಮೀಣ ವಸತಿ ಯೋಜನೆ**

ಇಂದಿರಾ ಆವಾಸ್ ಯೋಜನೆಯು 1985ರಲ್ಲಿ ಸರ್ಕಾರದಿಂದ ಪ್ರಾರಂಭಿಸಲ್ಪಟ್ಟಿತು. ಈ ಯೋಜನೆಯಡಿಯಲ್ಲಿ ಎಸ್‌ಸಿ/ಎಸ್‌ಟಿ ಕುಟುಂಬಗಳಿಗೆ ಮತ್ತು ಸಂಘಟಿತ ಕಾರ್ಮಿಕರಿಗೆ ಉಚಿತ ವಸತಿಯನ್ನು ನೀಡಲಾಗುತ್ತದೆ.

**ಸಂಸದರ ಆದರ್ಶಗ್ರಾಮ ಯೋಜನೆ:**

ಈ ಯೋಜನೆಯನ್ನು 11 ಅಕ್ಟೋಬರ್ 2014ರಂದು ಭಾರತ ಸರ್ಕಾರವು ಪ್ರಾರಂಭಿಸಿತು. ಈ ಯೋಜನೆಯಲ್ಲಿ ಪ್ರತಿ ಮೂರು ಗ್ರಾಮಗಳಲ್ಲಿ ಸಾಂಸ್ಥಿಕ ಮತ್ತು ಭೌತಿಕ ಮೂಲಸೌಕರ್ಯವನ್ನು ಅಭಿವೃದ್ಧಿ ಪಡಿಸುವ ಜವಾಬ್ದಾರಿಯನ್ನು ಸಂಸತ್ತಿನ ಪ್ರತಿ ಸದಸ್ಯರು ಹೊಂದಿರುತ್ತಾರೆ.

**ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಗೆ ಸಂಬಂಧಿಸಿದಂತೆ ಸರ್ಕಾರವು ವಿವಿಧ ಪ್ರದೇಶಗಳಲ್ಲಿ ಕೈಗೊಂಡಿರುವ ಯೋಜನೆಗಳು**

**ಪ್ರಧಾನಮಂತ್ರಿ ರೈತ ಸಮ್ಮಾನ್ ಯೋಜನೆ**

ಈ ಯೋಜನೆಯನ್ನು 24 ಫೆಬ್ರವರಿ 2019ರಂದು ಕೇಂದ್ರ ಸರ್ಕಾರವು ಆರಂಭಿಸಿತು. ಈ ಯೋಜನೆಯಡಿಯಲ್ಲಿ ದೇಶದ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ವರ್ಷಕ್ಕೆ 6000 ರೂ ಆದಾಯ ಬೆಂಬಲವನ್ನು ಮೂರು ಕಂತುಗಳಲ್ಲಿ ಒದಗಿಸಲಾಗುವುದು ಅದನ್ನು ನೇರವಾಗಿ ಅವರ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುತ್ತದೆ.

**ಪ್ರಧಾನಮಂತ್ರಿ ಕೃಷಿ ಸಿಂಚಾಯ್ ಯೋಜನೆ**

ಈ ಕಾರ್ಯಕ್ರಮವನ್ನು ಭಾರತ ಸರ್ಕಾರವು ಸೂಕ್ತವಾದ ತಂತ್ರಜ್ಞಾನಗಳ ಮೂಲಕ ನೀರಿನ ಸಂರಕ್ಷಣೆ ಮತ್ತು ನಿರ್ವಹಣೆ, ನೀರಾವರಿ ವ್ಯಾಪ್ತಿಯ ವಿಸ್ತರಣೆ ಹಾಗೂ ಪರಿಣಾಮಕಾರಿ ಬಳಕೆ,ನೀರಿನ ಕೋಯ್ಲು, ನೀರಿನ ಸಂರಕ್ಷಣೆ ಮತ್ತು ಮಣ್ಣಿನ ಸಂರಕ್ಷಣೆಗಾಗಿ ಜಲಾನಯನ ವಿಧಾನ, ಅಂತರ್ಜಲ ಮರುಪೂರಣ, ಮಳೆಯಾಶ್ರಿತ ಪ್ರದೇಶಗಳ ಸಮಗ್ರ ಅಭಿವೃದ್ಧಿ ಹಾಗೂ ಕ್ಷೇತ್ರ ಮಟ್ಟದಲ್ಲಿ ನೀರಾವರಿ ವಲಯದಲ್ಲಿನ ಹೂಡಿಕೆಗಳನ್ನು ಸಾಧಿಸಲು ಆರಂಭಿಸಿತು.

**ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆ**

ಈ ಯೋಜನೆಯನ್ನು ಭಾರತ ಸರ್ಕಾರವು ಹಿಂದಿನ ರಾಷ್ಟ್ರೀಯ ಕೃಷಿ ವಿಮಾ ಯೋಜನೆ, ಹವಮಾನ ಆಧಾರಿತ ಬೆಳೆ ವಿಮಾ ಯೋಜನೆಗಳನ್ನು ರದ್ದುಗೊಳಿಸಿ 2006ರಲ್ಲಿ ಆರಂಭಿಸಿತು. ಇದು ಕೃಷಿ ವಲಯದಲ್ಲಿ ಸುಸ್ಥಿರ ಉತ್ಪಾದನೆಗೆ ಬೆಂಬಲವನ್ನೊದಗಿಸುವ, ರೈತರ ಬೆಳೆಗಳ ಸುರಕ್ಷತೆಯನ್ನು ಹೆಚ್ಚಿಸುವ ಮತ್ತು ಬೆಳೆ ವಿಮೆಯ ಗರಿಷ್ಠ ಪ್ರಯೋಜನವನ್ನು ರೈತರಿಗೆ ತಲುಪುವಂತೆ ಖಚಿತಪಡಿಸಿಕೊಳ್ಳುವ ಗುರಿಯನ್ನು ಹೊಂದಿದೆ.

ಗ್ರಾಮೀಣ ಪ್ರದೇಶಗಳಲ್ಲಿ ನಗರಸೌಕರ್ಯಗಳನ್ನು ಒದಗಿಸುವುದು(PURA), ಜಿಲ್ಲಾ ಗ್ರಾಮೀಣಾಭಿವೃದ್ಧಿ ಸಂಸ್ಥೆ ಸ್ಥಾಪನೆ(DRDA), ಜಲಾನಯನ ಅಭಿವೃದ್ಧಿ ಕಾರ್ಯಕ್ರಮ, ಸಮಗ್ರ ಬಂಜರುಭೂಮಿ ಅಭಿವೃದ್ಧಿ ಕಾರ್ಯಕ್ರಮ, ಬರಪೀಡಿತ ಪ್ರದೇಶಗಳ ಅಭಿವೃದ್ಧಿ ಕಾರ್ಯಕ್ರಮ, ಮರುಭೂಮಿ ಅಭಿವೃದ್ಧಿ ಕಾರ್ಯಕ್ರಮ, ಸಮಗ್ರ ಜಲಾನಯನ ನಿರ್ವಹಣಾ ಕಾರ್ಯಕ್ರಮಗಳು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಗೆ ಪೂರಕವಾಗಿವೆ

**ಶಿಕ್ಷಣಕ್ಕೆ ಸಂಬಂಧಿಸಿದಂತೆ ಕೈಗೊಂಡಿರುವ ಯೋಜನೆಗಳು**

**ಅನೌಪಚಾರಿಕ ಶಿಕ್ಷಣ ಯೋಜನೆ**

14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಎಲ್ಲಾ ಮಕ್ಕಳಿಗೆ ಶಿಕ್ಷಣ ಒದಗಿಸುವ ಉದ್ದೇಶದಿಂದ ಕೇಂದ್ರ ಸರ್ಕಾರ 1979–80 ರಲ್ಲಿ ಈ ಯೋಜನೆಯನ್ನು ಆರಂಭಿಸಿತು.

**ಕಪ್ಪುಹಲಗೆ ಕಾರ್ಯಾಚರಣೆ**

ರಾಷ್ಟ್ರೀಯ ಶಿಕ್ಷಣ ನೀತಿ ಅನ್ವಯ ದೇಶದ ಎಲ್ಲಾ ಪ್ರಾಥಮಿಕ ಶಾಲೆಗಳಿಗೆ ಕನಿಷ್ಠ ಅಗತ್ಯ ಸೌಲಭ್ಯಗಳನ್ನು ಒದಗಿಸಲು 1987 ರಲ್ಲಿ ಈ ಯೋಜನೆಯನ್ನು ಜಾರಿಗೊಳಿಸಿತು

**ಶಿಕ್ಷಣ ಹಕ್ಕು ಖಾಯಿದೆ:** ಇದು ಭಾರತದಲ್ಲಿ ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸುವ ಉದ್ದೇಶ ದೊಂದಿಗೆ ಕೇಂದ್ರ ಸರ್ಕಾರವು 2009 ರಲ್ಲಿ ಕೈಗೊಂಡ ಪ್ರಮುಖ ನಿಲುವಾಗಿದೆ. ಈ ಖಾಯಿದೆ ಪ್ರಕಾರ ಭಾರತದಲ್ಲಿ ವಾಸಿಸುವ ಎಲ್ಲಾ ಮಕ್ಕಳು ಪ್ರಾಥಮಿಕ ಶಿಕ್ಷಣವನ್ನು ಪೂರೈಸುವುದು ಕಡ್ಡಾಯವಾಗಿದೆ.

ಸಾಕ್ಷರತೆ ಮತ್ತು ಬೆಳವಣಿಗೆಯ ದರವನ್ನು ಇನ್ನಷ್ಟು ಹೆಚ್ಚಿಸಲು, ಕೇಂದ್ರ ಸರ್ಕಾರವು ಸರ್ವ ಶಿಕ್ಷಣ ಅಭಿಯಾನ, ಮಧ್ಯಾಹ್ನದ ಬಿಸಿ ಊಟ ಯೋಜನೆ, ಜವಹಾರ್ ನವೋದಯ ವಿದ್ಯಾಲಯ, ಮಹಿಳಾ ಶಿಕ್ಷಣ ಮತ್ತು ಸಬಲೀಕರಣ, ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ, ಮಾಹಿತಿ ಶಿಕ್ಷಣ ಮತ್ತು ಸಂವಹನ, ಅಂತರಾಷ್ಟ್ರೀಯ ಚಟುವಟಿಕೆಗಳು ಮುಂತಾದ ಅನೇಕ ಯೋಜನೆಗಳನ್ನು ಪ್ರಾರಂಭಿಸಿದೆ.

**ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಕೈಗೊಂಡಿರುವ ಯೋಜನೆಗಳು**

**ಗ್ರಾಮೀಣ ಜನರ ಕ್ರಿಯಾ ಮತ್ತು ತಂತ್ರಜ್ಞಾನ ಅಭಿವೃದ್ಧಿ ಮಂಡಳಿ (CAPART):** ಗ್ರಾಮೀಣ ಅಭಿವೃದ್ಧಿಯಲ್ಲಿ ಸಮುದಾಯದ ಸ್ವಯಂಪ್ರೇರಿತ ಕ್ರಮಗಳನ್ನು ಉತ್ತೇಜಿಸಲು ಮತ್ತು ಹೊಸ ತಂತ್ರಜ್ಞಾನದ ಅಳವಡಿಕೆ ಮೂಲಕ ಗ್ರಾಮೀಣ ಆರ್ಥಿಕತೆಯನ್ನು ಪುನಶ್ಚೇತನಗೊಳಿಸಲು ಇದನ್ನು 1986 ರಲ್ಲಿ ಸ್ಥಾಪಿಸಿತು.

**ಗ್ರಾಮೀಣ ತಂತ್ರಜ್ಞಾನ ಕ್ರಿಯಾ ಗುಂಪು (RUTAG):** ಭಾರತ ಸರ್ಕಾರದ ಪ್ರಧಾನ ವೈಜ್ಞಾನಿಕ ಸಲಹೆಗಾರರ ಕಛೇರಿಯು ಉನ್ನತ ವಿಜ್ಞಾನ ಮತ್ತು ತಂತ್ರಜ್ಞಾನದ ಮಧ್ಯಸ್ಥಿಕೆಯೊಂದಿಗೆ ಗ್ರಾಮೀಣ ಪ್ರದೇಶಗಳಿಗೆ ಸೂಕ್ತವಾದ ತಂತ್ರಜ್ಞಾನಗಳ ಅಭಿವೃದ್ಧಿ ಮತ್ತು ಪ್ರಸರಣಕ್ಕೆ ಬೆಂಬಲಿಸುವ ಉದ್ದೇಶದಿಂದ ಇದನ್ನು ಆರಂಭಿಸಿತು.

ದೂರಸಂಪರ್ಕವು ಗ್ರಾಮೀಣ ಮೂಲ ಸೌಕರ್ಯಗಳನ್ನು ನವೀಕರಿಸುವ ಪ್ರಯತ್ನದ ಪ್ರಮುಖ ಭಾಗವಾಗಿದೆ. ಭಾರತ್ ನಿರ್ಮಾಣ ಕಾರ್ಯಕ್ರಮದಡಿಯಲ್ಲಿ ಇದುವರೆಗೆ ಗ್ರಾಮ ಸಾರ್ವಜನಿಕ ದೂರವಾಣಿಯನ್ನು ಒದಗಿಸದಿರುವ ದೇಶದ 66.882 ಕಂದಾಯ ಗ್ರಾಮಗಳನ್ನು ಇದರ ವ್ಯಾಪ್ತಿಗೆ ಒಳಪಡಿಸಲಾಗುವುದು ಎಂದು ಖಚಿತಪಡಿಸಿಕೊಳ್ಳಲಾಗಿದೆ. ಮೇಲಿನ ಗ್ರಾಮದಲ್ಲಿ 14.103 ದೂರದ ಹಳ್ಳಿಗಳಲ್ಲಿ ಡಿಜಿಟಲ್ ಉಪಗ್ರಹ ಫೋನ್ ಟರ್ಮಿನಲ್ಗಳ ಮೂಲಕ ಸಂಪರ್ಕವನ್ನು ಕಲ್ಪಿಸಲಾಗುತ್ತದೆ.

**ಮೂಲಸೌಕರ್ಯಕ್ಕೆ ಸಂಬಂಧಿಸಿದಂತೆ ಕೈಗೊಂಡಿರುವ ಯೋಜನೆಗಳು**

**ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ**

ಈ ಕಾರ್ಯಕ್ರಮವನ್ನು ಮೂಲಸೌಕರ್ಯ ನೀಡುವ ಉದ್ದೇಶದಿಂದ ಕನಿಷ್ಠ 500 ಜನಸಂಖ್ಯೆ ಹೊಂದಿರುವ ಗ್ರಾಮೀಣ ಪ್ರದೇಶಗಳಿಗೆ ಸರ್ವಕಾಲಕ್ಕೂ ಸಂಚಾರಯೋಗ್ಯ ರಸ್ತೆಯ ಮೂಲಕ ಸಂಪರ್ಕ ಒದಗಿಸುವ ಗುರಿಯೊಂದಿಗೆ ಆರಂಭಿಸಲಾಯಿತು. ಗ್ರಾಮೀಣ ರಸ್ತೆಜಾಲದ ಸುಸ್ಥಿರ ನಿರ್ವಹಣೆಯನ್ನು ಖಚಿತ ಪಡಿಸಿಕೊಳ್ಳಲು ಭಾರತ ಸರ್ಕಾರವು ಏಕರೂಪದ ತಾಂತ್ರಿಕ ಮತ್ತು ನಿರ್ವಹಣಾ ಮಾನದಂಡಗಳನ್ನು ಹೊಂದಿಸಲು ಹಾಗೂ ಈ ಯೋಜನೆಯನ್ನು ಸುಗಮಗೊಳಿಸಲು ಪ್ರಯತ್ನಿಸುತ್ತಿದೆ.

**ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ(MGNREGA)**

ಸಾರ್ವಜನಿಕ ಕೆಲಸಕ್ಕೆ ಸಂಬಂಧಿಸಿದ ಕೌಶಲ್ಯ ರಹಿತ ಕೆಲಸಗಳನ್ನು ಮಾಡಲು ಸಿದ್ಧವಿರುವ ಯಾವುದೇ ಗ್ರಾಮೀಣ ಕುಟುಂಬದ ವಯಸ್ಕ ಸದಸ್ಯರಿಗೆ ಪ್ರತಿ ಹಣಕಾಸು ವರ್ಷದಲ್ಲಿ ನೂರುದಿನಗಳ ಉದ್ಯೋಗಕ್ಕೆ ಕಾನೂನು ಬದ್ಧ ಖಾತರಿ ಹಣವನ್ನು ನೀಡುವ ಮುಖಾಂತರ ಸ್ಥಳೀಯವಾಗಿ ಉದ್ಯೋಗವನ್ನು ನೀಡಲಾಗುತ್ತದೆ.

**ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆ**

ಗ್ರಾಮೀಣ ಪ್ರದೇಶಗಳಲ್ಲಿ ಬಾಳಿಕೆ ಬರುವ ಸಮುದಾಯ ಆಸ್ತಿಗಳ ರಚನೆಯೊಂದಿಗೆ ಹೆಚ್ಚುವರಿ ಉದ್ಯೋಗ ಮತ್ತು ಆಹಾರ ಭದ್ರತೆಯನ್ನೊದಗಿಸುವುದು. ರಾಷ್ಟ್ರೀಯ ಮೀನುಗಾರರ ಕಲ್ಯಾಣ ಯೋಜನೆ, ಇಂದಿರಾ ಆವಾಸ್ ಯೋಜನೆ, ರಾಷ್ಟ್ರೀಯ ಸಾಮಾಜಿಕ ನೆರವು ಕಾರ್ಯಕ್ರಮ, ಸಂಪೂರ್ಣ ನೈರ್ಮಲ್ಯ ಅಭಿಯಾನ, ಈ ರೀತಿಯ ಕಾರ್ಯಕ್ರಮಗಳು ಮೂಲಸೌಕರ್ಯ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿವೆ.

**ಗ್ರಾಮೀಣಾಭಿವೃದ್ಧಿಯಲ್ಲಿ ಸರಕಾರ ಎದುರಿಸುತ್ತಿರುವ ಸವಾಲುಗಳು**

1. ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಮೀಸಲಾದ ಹಣಕಾಸು, ಮಾನವ ಶಕ್ತಿ ಮತ್ತು ವ್ಯವಸ್ಥಾಪಕ ಸಂಪನ್ಮೂಲಗಳು ಸಂಪೂರ್ಣವಾಗಿ ಅಸಮರ್ಪಕವಾಗಿವೆ.
2. ಒಂದು ಕಾರ್ಯಕ್ರಮದ ಉದ್ದೇಶಗಳು ಇತರೆ ಉದ್ದೇಶಗಳೊಂದಿಗೆ ಘರ್ಷಣೆಯಾಗುತ್ತಿವೆ ಮತ್ತು ಅವುಗಳನ್ನು ಸಮನ್ವಯಗೊಳಿಸಲು ಯಾವುದೇ ಪರಿಪೂರ್ಣ ಕಾರ್ಯವಿಧಾನವಿಲ್ಲ ಎಂದು ಗಮನಿಸಬಹುದಾಗಿದೆ, ಪರಿಣಾಮವಾಗಿ ಅನೇಕ ಕಾರ್ಯಕ್ರಮಗಳು ತಮ್ಮ ಉದ್ದೇಶಗಳನ್ನು ಪೂರೈಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿವೆ.
3. ಹಲವು ಸಂದರ್ಭಗಳಲ್ಲಿ ಗ್ರಾಮೀಣ ಅಭಿವೃದ್ಧಿಯ ಸಾಧನಗಳನ್ನು ಸರಿಯಾಗಿ ಆಯ್ಕೆಮಾಡಲಾಗಿಲ್ಲ ಮತ್ತು ಅವು ನಿರೀಕ್ಷಿಸಿದ ಹಂತ ಹಾಗೂ ಉದ್ದೇಶಗಳಿಗೆ ಹೊಂದಿಕೆಯಾಗುವುದಿಲ್ಲ. ಅವು ಮೌಲ್ಯಯುತವಾದ ಸಾರ್ವಜನಿಕ ಸಂಪನ್ಮೂಲಗಳ ವ್ಯರ್ಥಕ್ಕೆ ಕಾರಣವಾಗುತ್ತವೆ ಮತ್ತು ಉದ್ದೇಶಗಳನ್ನು ಸಾಧಿಸುವಲ್ಲಿ ಅನಗತ್ಯ ವಿಳಂಬಗಳನ್ನು ಉಂಟುಮಾಡುತ್ತವೆ.
4. ರಾಷ್ಟ್ರೀಯ ಪಕ್ಷಗಳು ಇಂದು ರಾಷ್ಟ್ರೀಯ ಹಿತಾಸಕ್ತಿಗಳಿಗಿಂತ ಹೆಚ್ಚಾಗಿ ಪಕ್ಷದ ಹಿತಾಸಕ್ತಿಗಳಿಂದ ಮಾರ್ಗದರ್ಶಿಸಲ್ಪಡುತ್ತವೆ.
5. ವಾಸ್ತವಿಕ ಅನುಷ್ಠಾನಕ್ಕೆ ಜವಬ್ದಾರರಾಗಿರುವವರಿಗೆ ಸಮಂಜಸವಾಗಿ ಉತ್ತಮ ವೇತನ ನೀಡಿ, ಸೂಕ್ತವಾದ ತರಬೇತಿ ನೀಡಿದರೆ ಮತ್ತು ಸಾಕಷ್ಟು ಪ್ರೇರಣೆಯಿಂದ ಮಾತ್ರ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳ ಉತ್ತಮ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳಬಹುದು ಆದರೆ ಈವರೆಗೂ ಈ ಕಾರ್ಯ ನೆರವೇರಿಲ್ಲ.

**ಉಪಸಂಹಾರ**

ಒಟ್ಟಾರೆಯಾಗಿ ಭಾರತ ಸರ್ಕಾರವು ಗ್ರಾಮೀಣ ಅಭಿವೃದ್ಧಿಗಾಗಿ ಹಲವಾರು ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ, ಆದರೆ ಇನ್ನೂ ಈ ಪ್ರಕ್ರಿಯೆಯಲ್ಲಿ ಹಲವು ಲೋಪದೋಷಗಳಿವೆ, ಈ ಲೋಪ ದೋಷಗಳು ಅಥವಾ ಸಮಸ್ಯೆಗಳ ನಿವಾರಣೆಯು ಭಾರತದಲ್ಲಿ ಗ್ರಾಮೀಣ ಅಭಿವೃದ್ಧಿಯ ಪ್ರಕ್ರಿಯೆಯನ್ನು ವೇಗಗೊಳಿಸುತ್ತದೆ. ಹೀಗಾಗಿ ಕೆಲಸಮಾಡಲು ಬಹಳಷ್ಟು ಉಳಿದಿದೆ. ಈ ದಿಶೆಯಲ್ಲಿ ನಾವೆಲ್ಲರೂ ಒಗ್ಗಟ್ಟಿನಿಂದ ಅವಿಭಜಿತ ಗಮನದಿಂದ ಕೆಲಸ ಮಾಡಿದರೆ ಖಂಡಿತಾ ಯಶಸ್ಸು ಸಾಧಿಸಬಹುದು.

**ಪರಾಮರ್ಶನ ಗ್ರಂಥಗಳು**


- ಭೈರಪ್ಪ, ಕೆ. (2013). *ಗ್ರಾಮೀಣ ಅಭಿವೃದ್ಧಿ*, ಸ್ವಪ್ನ ಬುಕ್ ಹೌಸ್.
- ಕೃಷ್ಣಯ್ಯಗೌಡ, ಎಚ್. ಆರ್. (2022). *ಗ್ರಾಮೀಣ ಅಭಿವೃದ್ಧಿ ಮತ್ತು ಸಹಕಾರ.* ಚೇತನ ಬುಕ್ ಹೌಸ್.
- ಶಿವರಾಜಪ್ಪ, ಎಸ್. (ಸಂ.) (2016). *ಗಾಂಧೀಜಿ ಮತ್ತು ಗ್ರಾಮೀಣ ಭಾರತ.* ಮೈಸೂರು ವಿಶ್ವವಿದ್ಯಾನಿಲಯ.
- Gupta, K.R. (2004). *Rural Development in India.* Atlantic publishers.
- *Transforming rural India 2018-19.* (2020). Ministry of Rural Development.